**ಸಾಕ್ಷಿಯನ್ನು ದಿಃ *16/07/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಶ್ರೀ ಎಸಜಿಪಿ ವಕೀಲರಿಂದ 2 ನೇ ಎದುರುದಾರರ** ಪರವಾಗಿ.

ನಾನು ಹಾಜರುಪಡಿಸಿರುವ ನಿ.ಪಿ.19 ರಿಂದ 21 ರ ಸಿಂಡಿಕೇಟ ಬ್ಯಾಂಕನಲ್ಲಿ ನಿಪ್ಪ ಮುಖಾಂತರ ಜಮೆ ಆಗಿರುತ್ತದೆ ಎಂದರೆ ನಿಜ.

ದಿಃ01-09-2020 ರಂದು ನಮ್ಮ ಕೆಲಸಗಾರರಿಗೆ ವೇತನ ನೀಡಲು ನಾವು ರೂ.76,706/-ಗಳನ್ನು ಚೆಕ್ಕನ ಮುಖಾಂತರ ಜಮೆ ಮಾಡಿರುತ್ತೇವೆ ಎಂದರೆ ನಿಜ. ಇದೇ ದಾಖಲೆ ಪ್ರಕಾರ ಒಟ್ಟು ವೇತನ ರೂ.99,452/- ಜಮೆ ಆಗಿರುತ್ತದೆ ಎಂದರೆ ನಿಜ.

ದಿಃ05-06-2020 ರಂದು ಚೆಕ್ಕ ಹಣ 5 ಸಾವಿರ ರೂಪಾಯಿ ಮಾತ್ರ ಇದ್ದು, ಜಮೆ ಮೊತ್ತ 50 ಸಾವಿರ ರೂಪಾಯಿ ತೋರಿಸಿದ್ದು ಇರುತ್ತದೆ ಎಂದರೆ ನಿಜ. ಅದರಲ್ಲಿ ಅಕ್ಷರಗಳಲ್ಲಿ ಒಂದು ಲಕ್ಷ ರೂಪಾಯಿ ಎಂದು ಬರೆದಿದ್ದು ಇರುತ್ತದೆ ಎಂದರೆ ನಿಜ.

ದಿಃ06-03-2020 ರಂದು ಚೆಕ್ಕ ಹಣ 5 ಸಾವಿರ ರೂಪಾಯಿ ಮಾತ್ರ ಇದ್ದು, ಜಮೆ ಮೊತ್ತ 50 ಸಾವಿರ ರೂಪಾಯಿ ತೋರಿಸಿದ್ದು ಇರುತ್ತದೆ ಎಂದರೆ ನಿಜ. ಅದರಲ್ಲಿ ಅಕ್ಷರಗಳಲ್ಲಿ ಒಂದು ಲಕ್ಷ ರೂಪಾಯಿ ಎಂದು ಬರೆದಿದ್ದು ಇರುತ್ತದೆ ಎಂದರೆ ನಿಜ. ಸದರಿ ಲೇಟರ ಮೇಲಿರುವ ಸೀಲು ಕರ್ನಾಟಕ ಬ್ಯಾಂಕಿನದು ಇದ್ದು, ಸಿಂಡಿಕೇಟ ಬ್ಯಾಂಕಿನದು ಇರುವುದಿಲ್ಲ ಎಂದರೆ ನಿಜ.

ನಿ.ಪಿ.21 ರ ಪ್ರಕಾರ ಮೃತರಿಗೆ ಸಂಬಂಧಪಟ್ಟಿದೆ ಎಂದು ಹೇಳಲಾದ ದಾಖಲಾತಿಗಳು ಎಂದರೆ ಜುಲೈ 2018 ರಿಂದ ಮಾರ್ಚ 2019 ರವರೆಗೆ ಮಾತ್ರ ಎಂದರೆ ನಿಜ. ನಿ.ಪಿ.21 ರಂತೆ ಇರುವ 31 ವೇತನ ಪ್ರಮಾಣಪತ್ರಗಳಲ್ಲಿ ಮೃತ ಬಿ.ಎನ್.ಹಳ್ಳಿಕೇರಿ ಇವರ ಹೆಸರು ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಮೃತರೇ ನನ್ನ ಮಗಳ ಹೆಸರಿನಲ್ಲಿ ಜಮೆ ಮಾಡಬೇಕೆಂದು ಬೇಡಿಕೆ ನೀಡಿರುವ ಕಾರಣ ಅವರ ಮಗಳಾದ ಚೈತ್ರಾ ಹಳ್ಳಿಕೇರಿ ಇವರ ಹೆಸರಿಗೆ ಜಮೆ ಆಗಿದ್ದು ಇರುತ್ತದೆ ಎಂದು ಉತ್ತರಿಸುತ್ತಾರೆ. ಈ ರೀತಿ ಬೇಡಿಕೆಯನ್ನು ಲಿಖಿತವಾಗಿ ನೀಡಲಿಲ್ಲ, ನಮ್ಮ ಮಾಲೀಕರನ್ನು ಕೇಳಿಕೊಂಡಿದ್ದಾರೆ. ಚೈತ್ರಾ ಹಳ್ಳಿಕೇರಿ ಇವರು ನಮ್ಮ ಕಂಪನಿಯಲ್ಲಿ ಕೆಲಸ ಮಾಡುವುದಿಲ್ಲ. ಮೃತನ ಬೇಡಿಕೆ ಮೇರೆಗೆ ಅವರ ಮಗಳ ಖಾತೆಗೆ

ಮೃತರ ವೇತನ ವರ್ಗಾಯಿಸಿದ್ದು ಮತ್ತು ಅವರ ಮಗಳು ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿರುವ ವಿಷಯ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಮೃತರ ಮಗಳು ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಮೃತರಿಗೆ ಹೆಚ್ಚಿನ ಪರಿಹಾರ ಹಣ ಸಿಗಲಿ ಎಂದು ಈ ರೀತಿ ಹೇಳಿಕೆಗಳನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ನೀಡಿರುವ ಲೇಟರಗಳು ಸಿಂಡಿಕೇಟ ಬ್ಯಾಂಕಿಗೆ ಇದ್ದರೂ ಸಹ ಬೇರೆ ಬೇರೆ ಬ್ಯಾಂಕುಗಳ ಸೀಲು ಇವೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾವು ಕರ್ನಾಟಕ ಬ್ಯಾಂಕ ಮುಖಾಂತರ ವೇತನ ನೀಡುತ್ತಿದ್ದೇವೆ, ಆದರೆ ಸಿಂಡಿಕೇಟ ಬ್ಯಾಂಕ ಎಂದು ತಪ್ಪಾಗಿ ನಮೂದು ಆಗಿದ್ದು, ಅದನ್ನು ನಮ್ಮ ಮಾಲೀಕರು ತಿದ್ದುಪಡಿ ಮಾಡಿಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಬ್ಯಾಂಕು ಸೀಲಗಳ ಜೊತೆಗೆ ಸಹಿಗಳು ಇರುವುದಿಲ್ಲ ವತ್ತು ಜಮೆ ಆಗಿರುವ ಕುರಿತು ಯಾವುದೇ ಇನವರ್ಡ ನಂಬರ ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಖಾತೆಗಳಿಗೆ ಜಮೆ ಆಗಿರುವ ವಿವರಗಳನ್ನು ತರಿಸಿಕೊಂಡರೆ ಗೊತ್ತಾಗುತ್ತದೆ ಎಂದು ಉತ್ತರಿಸುತ್ತಾರೆ. ಆದ್ದರಿಂದ ಸದರಿ ದಾಖಲೆಗಳು ಸೃಷ್ಟೀಕರಣ ಮಾಡಿರುವ ಖೊಟ್ಟಿ ದಾಖಲೆಗಳು ಎಂದರೆ ಸರಿಯಲ್ಲ.

ವೇತನವನ್ನು ನೆಪ್ಟ ಮುಖಾಂತರ ಕೊಡುವ ಕಾರಣ ಯುಟಿಆರ ನಂಬರ ಎಂದು ಇರುವ ದಾಖಲಾತಿಯನ್ನು ನಾನು ಹಾಜರುಪಡಿಸಿಲ್ಲ. ಸದರಿ ಯುಟಿಆರ ನಂಬರನ ಉಲ್ಲೇಖ ನಮ್ಮ ಮಾಲೀಕರ ಖಾತೆಯ ವಿವರಗಳ ಪಟ್ಟಿಯಲ್ಲಿ ಇರುತ್ತದೆ.

ನಮ್ಮ ಕಂಪನಿ ಕಾಯ್ದೆಯಲ್ಲಿ ನೊಂದು ಆಗಿರುತ್ತದೆ, ಅಲ್ಲಿ ಇನವರ್ಡ ಮತ್ತು ಔಟವರ್ಡ ರಜಿಸ್ಟರ ಮೆಂಟೆನ ಮಾಡುತ್ತೇವೆ ಎಂದರೆ ನಿಜ. ನಿ.ಪಿ.19 ರಿಂದ 20ರ ಪೂರಕವಾಗಿ ನೀಡಿರುವ ದಾಖಲಾತಿಗಳ ಮೂಲ ಔಟವರ್ಡ ರಜಿಸ್ಟರ ಹಾಜರುಪಡಿಸಿಲ್ಲ ಎಂದರೆ ನಿಜ. ನಾನು ವೇತನಗಳನ್ನು ನೀಡಿಲ್ಲ, ಆದ್ದರಿಂದ ಔಟವರ್ಡ ರಜಿಸ್ಟರ ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಖಾತೆ ನಂ.120/70, 9964 ಮತ್ತು 1308ಗಳು ನಮ್ಮ ಕಂಪನಿಯ ಸಿಂಡಿಕೇಟ ಬ್ಯಾಂಕನ ಕರೆಂಟ ಖಾತೆಗಳು ಎಂದರೆ ನಿಜ. ಸದರಿ ಮೂರು ಖಾತೆಗಳ ಬ್ಯಾಲೆನ್ಸ ಶೀಟು ಇರುತ್ತವೆ ಎಂದರೆ ನಿಜ. ಸದರಿ ಬ್ಯಾಲೆನ್ಸ ಶೀಟಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಮಗೆ ಹೊರಗುತ್ತಿಗೆ ಆಧಾರದ ಮೇಲೆ

ಇರುವ ನೌಕರರಿಗೆ ಸಂಬಳ ಕೆಐಎಡಿಬಿಯಿಂದ ಬರುತ್ತದೆ ಎಂದು ತೋರಿಸಲು ಮತ್ತು ಸದರಿ ಸಂಬಳವನ್ನು ನಮ್ಮ ಖಾತೆಗೆ ಜಮೆ ಮಾಡಿಕೊಂಡು ಅವರವರ ಖಾತೆಗೆ ಪುನಃ ವಿತರಣೆ ಮಾಡಿರುವ ಕುರಿತ ದಾಖಲಾತಿಗಳು ಹಾಜರುಪಡಿಸಿಲ್ಲ ಎಂದರೆ ನಿಜ. ಆದ್ದರಿಂದ ಈ ರೀತಿ ಹೇಳಿರುವ ಎರಡು ವ್ಯವಹಾರಗಳು ಸುಳ್ಳು ಸಂಗತಿಗಳು ಎಂದರೆ ಸರಿಯಲ್ಲ.

ಮೃತ ಹಳ್ಳಿಕೇರಿ ಇವರು ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಮತ್ತು ಅವರಿಗೆ ನಾವು ವೇತನ ಕೊಡುತ್ತಿದ್ದೇವೆ ಎಂದು ಹಾಜರುಪಡಿಸಿರುವ ದಾಖಲಾತಿಗಳು ಸೃಷ್ಟೀಕರಣ ಮಾಡಿರುವ ದಾಖಲಾತಿಗಳು ಎಂದರೆ ಸರಿಯಲ್ಲ. ಈ ರೀತಿ ಇರುವಾಗ ನಾನು ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಹಣ ಸಿಗಲಿ ಎಂದು ಸುಳ್ಳು ದಾಖಲಾತಿಗಳೊಂದಿಗೆ ಸುಳ್ಳು ಪ್ರಮಾಣಪತ್ರದ ಮೂಲಕ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರ ಹೇಳಿಕೆ ಮೇರೆಗೆ ಸದರಿ ದಾಖಲಾತಿಗಳನ್ನು ಹಾಜರುಪಡಿಸಿಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.